***<u>ದಿಃ 05-02-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>***

**<u>ಮುಂದುವರೆದ *ಪಾಟೀ ಸವಾಲುಃ* ಎದುರುದಾರರ ಪರ *ವಕೀಲರಿಂದ*</u>**

ನಾನು ಮುಖ್ಯ ವಿಚಾರಣೆ ಹಾಗೂ ಪಾಟೀ ಸವಾಲಿನಲ್ಲಿ ಹೇಳಿದ ಸಾಕ್ಷ್ಯವು ಸತ್ಯವಾಗಿರುತ್ತದೆ. ನಮ್ಮ ತಂದೆಯ ಅಣ್ಣ ತಮ್ಮಂದಿರು ಮೂರು ಜನ ಇದ್ದು, ಅವರಲ್ಲಿ ವಿಶ್ವ, ಜನಾರ್ಧನಶಾಸ್ತ್ರಿ, ಗುರುಮೂರ್ತಿ ಶಾಸ್ತ್ರಿ ಆಗಿರುತ್ತಾರೆ. ನನ್ನ ತಂದೆ ಅಣ್ಣತಮ್ಮಂದಿರು ಸದ್ಯದ ಮಟ್ಟಿಗೆ ಸಂಬಂದ ಚೆನ್ನಾಗಿರುವುದಿಲ್ಲ, ಸಾಕ್ಷಿ ಮುಂದುವರೆದು ಮುಂಚೆಯಿಂದಲೂ ಸಂಬಂದ ಚೆನ್ನಾಗಿಲ್ಲ ಎಂದು ನುಡಿಯುತ್ತಾರೆ. ಜನಾರ್ಧನಚಾರಿ ಯವರು ನನಗೆ ಚಿಕ್ಕಪ್ಪನಾಗಬೇಕೆಂದರೆ ಸರಿ. ಅವರು ವಕೀಲರಾಗಿರುತ್ತಾರೆಂದರೆ ಸರಿ. ನಮ್ಮ ಮದುವೆಯಲ್ಲಿ ಪೋಟೋಗ್ರಾಫಿ, ವೀಡಿಯೋಗ್ರಾಫಿ ಮಾಡಿರುತ್ತಾರೆ. ನಾನು ವೀಡಿಯೋ ತೆಗೆದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ವೀಡಿಯೋದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನಿಪಿ-*3* ನ್ನು ನಾವೇ ಪ್ರಿಂಟ್ ಮಾಡಿಸಿರುತ್ತೇವೆ. ನಿಪಿ*3* ರಲ್ಲಿ ತೋರಿಸಿರುವ ವಿವಾಹ ದಿನಾಂಕ, ಸಮಯ ಹಾಗೂ ಸ್ಥಳವಾದ ಶ್ರೀ ಮಲ್ಲಿಕಾರ್ಜುನಸ್ವಾಮಿ ಸನ್ನಿಧಿ, ಯಗಟಿಪುರ, ಕಡೂರು ತಾಲ್ಲೂಕು ನಿಜವಿರುತ್ತದೆ. ನಿಪಿ*3* ರಲ್ಲಿ ಸುಖಾಗಮನ ಬಯಸುವವರು ದೊಡ್ಡಮಲ್ಲಪ್ಪಾಚಾರ್ ವಂಶಸ್ಥರು ಎಂದು ನಮೂದಾಗಿದೆ ಎಂದರೆ ಸರಿ. ದೊಡ್ಡಮಲ್ಲಪ್ಪಾಚಾರ್ ರವರು ನಮ್ಮ ತಾತ, ಮುತ್ತಾತ ಇರಬಹುದು, ನಮ್ಮ ತಂದೆ ಕಡೆಯ ವಂಶಸ್ಥರಾಗಿರುತ್ತಾರೆ.

ನಮ್ಮ ಮದುವೆ ಮಾತುಕತೆಯು ಬೆಂಗಳೂರಿನಲ್ಲಿರುವ ಹುಡುಗನ ಮನೆಯಲ್ಲಿ ನಡೆದಿರುತ್ತದೆ. ಆ ಸಮಯದಲ್ಲಿ ನಮ್ಮ ತಾಯಿ, ತಂದೆ, ನನ್ನ ತಮ್ಮ, ಎದುರುದಾರರ ಪರ ಬ್ರೋಕರ್ ಹಾಜರಿರುತ್ತಾರೆ. ಮದುವೆಯಾದ ನಂತರ ಯಾವ ತಾರೀಖಿನಿಂದ ಯಾವ ತಾರೀಖಿನವರೆಗೂ ಎದುರುದಾರರ ಮನೆಯಲ್ಲಿ ವಾಸವಾಗಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ತಾರೀಖು ನೆನಪಿಲ್ಲ, ಆದರೆ *8* ತಿಂಗಳು ಎದುರುದಾರರ ಮನೆಯಲ್ಲಿ ವಾಸವಾಗಿರುತ್ತೇನೆಂದು ನುಡಿಯುತ್ತಾರೆ. ನಾನು ಮೊಬೈಲನ್ನು *2* ವರ್ಷಗಳಿಂದ ಬಳಸುತ್ತಿದ್ದೇನೆ. ನನ್ನ ಮೊಬೈಲ್ ಸಂಃ ***7348945872*** ಆಗಿರುತ್ತದೆ. ನಾನು ಐ ಟಿ ಡಿಪ್ಲೊಮೋ ಕೋರ್ಸಿಗೆ ಜಾಯಿನ್ ಆಗಿದ್ದೆ ಎಂದರೆ ಸಾಕ್ಷಿಯು ನಾನು ***10*** ನೇ ತರಗತಿ ಮಾತ್ರ ಓದಿರುತ್ತೇನೆಂದು ನಡಿಯುತ್ತಾರೆ. ದಿಃ***02-04-2016*** ರಂದು ಬೆಂಗಳೂರಿನ ಕೆಂಗೇರಿ ಪೋಲೀಸ್ ಠಾಣೆಗೆ

ಹೋಗಿ ದೂರು ನೀಡಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ನನ್ನ ತಮ್ಮ, ನನ್ನ ತಂದೆ, ನನ್ನ ಗಂಡ, ನನ್ನ ನಾದಿನಿ ಹಾಜರಿದ್ದರು. ನಾನು ನನ್ನ ನಾದಿನಿ ಯಾದ ಸುಶೀತಮ್ಮ ನವರು ಕಂಟ್ರೋಲ್ ರೂಂಗೆ ಪೋನ್ ಮಾಡಿ ಹೊಯ್ಸಳ ಜೀಪ್ ಕರೆಸಿರುತ್ತಾರೆಂದು ಹೇಳಿರುತ್ತೇನೆಂದರೆ ಸರಿ. ನನ್ನ ತಂದೆ ಮಾತ್ರ ಹೊಯ್ಸಳ ಗಾಡಿಯಲ್ಲಿ ಪೋಲೀಸ್ ಠಾಣೆಗೆ ಹೋಗಿದ್ದು, ನಾನು ತುಂಬಾ ವೀಕ್ ಆಗಿದ್ದರಿಂದ ಆಟೋದಲ್ಲಿ ಕೆಂಗೇರಿ ಪೋಲೀಸ್ ಠಾಣೆಗೆ ಹೋಗಿರುತ್ತೇನೆ. ನನ್ನ ನಾದಿನಿಯಾದ ಸುಶೀತಮ್ಮ, ನನ್ನ ಗಂಡ ಮಂಜುನಾಥ, ಅತ್ತೆ ರತ್ನಮ್ಮ ನವರು ತುಂಬಾ ಹೊಡೆದಿದ್ದರು. ಆದ್ದರಿಂದ ನನಗೆ ತುಂಬಾ ಸುಸ್ತಾಗಿತ್ತು. ನನ್ನ ತಂದೆ, ತಮ್ಮನಿಗೆ ಯಾರೂ ಮಾಹಿತಿ ನೀಡಿರುವುದಿಲ್ಲ, ಅವರು ನಮ್ಮ ತಾಯಿಗೆ ಹುಷಾರಿಲ್ಲ ಎಂದು ನನ್ನನ್ನು ಕರೆದುಕೊಂಡು ಹೋಗಲು ನಮ್ಮ ಮನೆಗೆ ಬಂದಿದ್ದರು.

ನನ್ನ ಹೇಳಿಕೆಯಲ್ಲಿ ನಾನು ನನ್ನ ತಂದೆಯವರು ಮಹಿಳಾ ಸಂಘಟನೆಗಳನ್ನು ಕರೆದುಕೊಂಡು ಬಂದಿದ್ದರೆಂದು ನಾನು ಹೇಳಿರುವುದಿಲ್ಲ. ನನ್ನ ನಾದಿನಿ ಹೊಯ್ಸಳ ಗಾಡಿಯನ್ನು ಕರೆಸಿದ್ದಕ್ಕಾಗಿ ನಾವು ಪೋಲೀಸ್ ಸ್ಟೇಷನ್‌ಗೆ ಹೋಗದೇ ಇದ್ದರೆ ಏನಾಗುತ್ತದೋ ಎಂಬ ಕಾರಣಕ್ಕೆ ನಾನು ತುಂಬಾ ನಿತ್ರಾಣವಾಗಿದ್ದರಿಂದ ಆಸ್ಪತ್ರೆಗೆ ಹೋಗದೇ ಪೋಲೀಸ್ ಠಾಣೆಗೆ ಆಟೋದಲ್ಲಿ ಹೋಗಿರುತ್ತೇನೆ. ನಾನು ಅಂದು ರಾತ್ರಿ ***10-30*** ಗಂಟೆಗೆ ಪೋಲೀಸ್ ಠಾಣೆಯಿಂದ ಹೊರಗಡೆ ಬಂದಿದ್ದು, ನನ್ನ ಗಂಡ ಬೇರೆ ಕ್ವಾಟ್ರಸ್ ಮಾಡಿ ನನ್ನನ್ನು ಹಿಡುತ್ತೇನೆಂದು ಭರವಸೆ ನೀಡಿದ್ದರಿಂದ ಅಂದು ರಾತ್ರಿ ನಾನು ನಮ್ಮ ತಂದೆಯವರ ಪರಿಚಯದವರ ಮನೆಯಲ್ಲಿ ಇದ್ದು, ನಂತರ ಮಲ್ಲೇಶ್ವರಂ ಆಸ್ಪತ್ರೆಗೆ ಹೋಗಿ ಚಿಕಿತ್ಸೆಗೆ ಪಡೆದಿರುತ್ತೇನೆ. ಆ ಪರಿಚಯಸ್ಥರ ಹೆಸರು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ಅವರು ನನ್ನ ತಂದೆಯ ಪರಿಚಯಸ್ಥರಾಗಿರುತ್ತಾರೆಂದು ನುಡಿಯುತ್ತಾರೆ.

*(ಮುಂದುವರದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯ್ತು)*

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***